# ಚೌಕಿ, ಅದ್ಭುತ ಕಲಾ ಸೃಷ್ಟಿಯ ತಾಣ



ಕರಾವಳಿ ಕರ್ನಾಟಕದ ಗಂಡುಕಲೆಯೆಂದೇ ಪ್ರಸಿದ್ಧಿ ಪಡೆದಿರುವ ಯಕ್ಷಗಾನವು ಅಲ್ಲಿನ ಸಾಂಸ್ಕೃತಿಕ ಪರಂಪರೆಯಾಗಿದೆ. ಈ ಕಲಾಪ್ರಕಾರವು ಭಾಗವತಿಕೆಯ ಹಾಡು, ನೃತ್ಯ, ಅರ್ಥಗಾರಿಕೆಗಳ ಹೊರತಾಗಿ ವರ್ಣಮಯ ವೇಷಭೂಷಣಗಳಿಗೂ ಪ್ರಸಿದ್ಧವಾಗಿದೆ. ಯಕ್ಷಗಾನದ ವೇಷಭೂಷಣಗಳಲ್ಲಿ ತೆಂಕುತಿಟ್ಟು ಮತ್ತು ಬಡಗುತಿಟ್ಟು ಎಂಬ 2 ಪ್ರಕಾರಗಳಿವೆ. ಯಕ್ಷಗಾನದ ಬಣ್ಣ ಹಚ್ಚಿಕೊಳ್ಳುವ, ವೇಷಭೂಷಣ ತೊಡುವ ಸ್ಥಳವನ್ನು 'ಚೌಕಿ' ಎಂದು ಸಾಂಪ್ರದಾಯಿಕವಾಗಿ ಹೆಸರಿಸಲಾಗಿದೆ. ಈ ಪ್ರಸಾಧನ ಕೋಣೆಯು ಹಲವಾರು ಅದ್ಭುತ ಸೃಜನಶೀಲ ಪಾತ್ರಗಳು ಹುಟ್ಟಿಕೊಳ್ಳುವ ಸ್ಥಳವಾಗಿದೆ. ಕಲಾವಿದರು ತಮ್ಮ ಪಾತ್ರಕ್ಕೆ ತಕ್ಕ ವೇಷಭೂಷಣವನ್ನು ತಾವೇ ಮಾಡಿಕೊಳ್ಳುವುದು ವಾಡಿಕೆ. ಬಡಗುತಿಟ್ಟು ಯಕ್ಷಗಾನ ಪ್ರಕಾರದಲ್ಲಿ ಕೇದಿಗೆ ಕಿರೀಟ ಮತ್ತು ಕೇದಿಗೆ ಮುಂದಲೆಗಳ ವೇಷಭೂಷಣ ವಿಶೇಷವೆನಿಸಿದೆ. ಹಾಗೆಯೇ ತೆಂಕು ತಿಟ್ಟಿನಲ್ಲಿ ಬಣ್ಣದ ವೇಷದ ಮುಖವರ್ಣಿಕೆ ಅದ್ಭುತ ಕಲಾ ಸೃಷ್ಟಿಯೆನ್ನಬಹುದು. ಕಲಾವಿದರಿಗೆ ಈ ವೇಷಭೂಷಣಗಳೊಂದಿಗೆ ಅಣಿಯಾಗಲು 3ರಿಂದ 4 ಗಂಟೆಗಳ ಸಮಯ ತಗಲುತ್ತದೆ.

ಮಂಗಳೂರಿನ ಪಿಲಿಕುಳ ನಿಸರ್ಗಧಾಮದಲ್ಲಿ ಪ್ರದರ್ಶನಕ್ಕಿಡಲಾಗಿರುವ ಪರಂಪರಾಗತ ಯಕ್ಷಗಾನ ಚೌಕಿಯ ಪ್ರತಿಕೃತಿಯನ್ನು ಚಿತ್ರದಲ್ಲಿ ಕಾಣಬಹುದಾಗಿದೆ. ಸುಮಾರು 5 ದಶಕಗಳ ಹಿಂದೆ ರಾತ್ರಿ ಪೂರ್ತಿ ಗ್ಯಾಸ್ ಲೈಟ್ ಬೆಳಕಿನಲ್ಲಿ ಯಕ್ಷಗಾನ ಚೌಕಿಯ ಕಾರ್ಯಕಲಾಪಗಳು ನಡೆಯುತ್ತಿದ್ದವು. ಟಿಕೆಟ್ ಸಹಿತ ವ್ಯಾವಹಾರಿಕ ಮೇಳಗಳ ಯಕ್ಷಗಾನ ಪ್ರದರ್ಶನವು ಟೆಂಟಿನೊಳಗಡೆ ನಡೆಯುತ್ತಿದ್ದು ಚೌಕಿಯೂ ಪ್ರತ್ಯೇಕ ಟೆಂಟ್ ಕೋಣೆಯಲ್ಲಿರುತ್ತಿತ್ತು. ಟಿಕೆಟ್ ರಹಿತ ಪ್ರಾಯೋಜಿತ ಅಥವಾ ಹರಕೆಯ ಬಯಲಾಟಗಳು ಮುಕ್ತ ಬಯಲಲ್ಲಿ ಪ್ರದರ್ಶನಗೊಳ್ಳುತ್ತಿದ್ದರೂ, ಚೌಕಿ ಮಾತ್ರ ಟೆಂಟ್ ಆವರಣದೊಳಗಿದ್ದು, ಗೌಪ್ಯವಾಗಿಯೇ ವೇಷಭೂಷಣಗಳು ಸಿದ್ಧಗೊಳ್ಳುತ್ತಿದ್ದವು. ಈಗ ಪ್ರಾಯೋಜಿತ ಅಥವಾ ಹವ್ಯಾಸಿ ಯಕ್ಷಗಾನ ಪ್ರದರ್ಶನಗಳು ಹಗಲು ಹೊತ್ತಿನಲ್ಲೂ ಜರಗುತ್ತಿದ್ದು, ಚೌಕಿಗಳು ಆಧುನಿಕ ವಿದ್ಯುದ್ದೀಪಗಳೊಂದಿಗೆ ಮುಕ್ತವಾಗಿ ಬೆಳಗುತ್ತಿವೆ.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ



# ಸ್ಟ್ರಾಬೆರಿ ಪೇರಳೆ

ಇದು ಪೇರಳೆ ಕುಟುಂಬಕ್ಕೆ ಸೇರಿದ್ದಾದರೂ ಜೊತೆಯಲ್ಲಿ ಸ್ಟ್ರಾಬೆರಿ ಹೆಸರು ಸೇರಿದೆ. ಸಣ್ಣ ಸಣ್ಣ ಗಾತ್ರದ ಕೆಂಪು ಬಣ್ಣದ ಈ ಹಣ್ಣು ನೋಡಲು ಸ್ಟ್ರಾಬೆರಿ ಹಣ್ಣಿನಂತೆಯೇ ಇರುವುದರಿಂದ, ಇದಕ್ಕೆ ಸ್ಟ್ರಾಬೆರಿ ಪೇರಳೆ ಎನ್ನುವ ಹೆಸರಿದೆ. ಕೆಂಪು ಪೇರಳೆ, ಹುಳಿ ಪೇರಳೆ ಎಂಬಿತ್ಯಾದಿ ಹೆಸರುಗಳೂ ಇವೆ. ಈ ಹಣ್ಣಿನ ಗಿಡವು ತುಂಬಾ ದೊಡ್ಡದೂ ಅಲ್ಲ, ಬಹಳ ಚಿಕ್ಕದೂ ಅಲ್ಲ. ಮಧ್ಯಮ ಗಾತ್ರದಲ್ಲಿದೆ. ಬೇಸಿಗೆಯಲ್ಲಿ ಗಿಡದ ತುಂಬಾ ಕಾಯಿ ಬಿಟ್ಟಿದ್ದರೂ ಹಣ್ಣಾಗುವುದು ಮಾತ್ರ ಮಳೆ ಬಿದ್ದ ಮೇಲೆಯೇ. ಈ ಪೇರಳೆಯು ಸಿಹಿ ಮತ್ತು ಹುಳಿ ಮಿಶ್ರಿತವಾಗಿರುವುದರಿಂದ ತಿನ್ನಲು ಬಲು ರುಚಿಯಾಗಿದೆ. ಹಾಗೆಯೇ ಈ ಹಣ್ಣಿನಿಂದ ಜಾಮ್, ವೈನ್ ತಯಾರಿಸಲಾಗುತ್ತದೆ. ಅಪರೂಪದ ಹಣ್ಣು ಎನ್ನುವ ಕಾರಣಕ್ಕೆ ಒಂದು ಗಿಡ ತಂದು ನೆಟ್ಟಿದ್ದು ಬಹಳ ಚೆನ್ನಾಗಿ ಬೆಳೆದಿದೆ. ಅವಸಾನದ ಅಂಚಿನಲ್ಲಿರುವ ಇಂತಹ ಅಪರೂಪದ ಹಣ್ಣಿನ ತಳಿಗಳನ್ನು ಬೆಳೆಸುವುದು ಮತ್ತು ಪೋಷಿಸುವುದು ತುಂಬಾ ಅವಶ್ಯಕ.

–ಜಯಂತಿ ರಾಘವೇಂದ್ರ, ಆಗುಂಬೆ

# ಮನಮೋಹಕ ಬಾವಿ ಕಟ್ಟೆ

ಬಹುತೇಕ ದೇವಸ್ಥಾನಗಳಲ್ಲಿ ನೀರಿಗಾಗಿ ಕೆರೆ ಅಥವಾ ಬಾವಿಯ ವ್ಯವಸ್ಥೆಯನ್ನು ಕಾಣುತ್ತೇವೆ. ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದ ಚೇರುಂಭ ಭಗವತೀ ದೇವಸ್ಥಾನದ ಒಳಾಂಗಣದ ಬಾವಿಯ ಚಿತ್ರಣವಿದು. ದೇವಸ್ಥಾನದ ಜೀರ್ಣೋದ್ಧಾರದ ಸಂದರ್ಭದಲ್ಲಿ ಶಿಲಾನ್ಯಾಸಕ್ಕೆ ಹೊಂದುವಂತೆ ದೇವಸ್ಥಾನದ ಬಾವಿಯನ್ನು ರೂಪಿಸಲಾಗಿದೆ. ಇದು ನೀರಿನ ಬಾವಿಯಾಗಿದ್ದರೂ ಇದರ ಕಲಾಕೃತಿ ಎಲ್ಲರನ್ನೂ ಆಕರ್ಷಿಸುತ್ತದೆ. ಮೈ ಪೂರ್ತಿ ಹಿತ್ತಾಳೆ ಬಣ್ಣ, ಮೇಲೆ ಚಿನ್ನದ ಬಣ್ಣದಿಂದ ಕಂಗೊಳಿಸುವ ಈ ಬಾವಿಕಟ್ಟೆಯಂತೆಯೇ ಹಲವಾರು ಕಡೆಗಳಲ್ಲಿ ಬಾವಿಕಟ್ಟೆಗಳನ್ನು ಕಾಣಬಹುದು. ಇಂತಹ ಕಲಾತ್ಮಕತೆಯು ಮನೆ, ದೇವಸ್ಥಾನಗಳ ಅಂದ ಹೆಚ್ಚಿಸುವುದರಲ್ಲಿ ಸಂಶಯವಿಲ್ಲ.

–ದಿವ್ಯಶ್ರೀ, ಮಂಗಳೂರು

